## ಊರುತನದ ಖರ್ಚಿನ ಪಟ್ಟಿ.

| ಜಿಲ್ಲೆಗಳು. | ಗೌಡ. | ಕುಲಕರಣಿ. | ನೌಕರರು. | ಒಟ್ಟು. | ಶೇಕಡಾ ಖರ್ಚು. |
|---|---|---|---|---|---|
| ಧಾರವಾಡ . . . . | ೬೬೯೦೦ | ೭೦೧೭೦ | ೬೫೯೮೦ | ೨೦೩೦೫೦ | ೧೫ |
| ಬೆಳಗಾವಿ . . . . | ೫೨೦೧೦ | ೫೭೭೪೦ | ೯೧೦೦೦ | ೨೦೦೭೫೦ | ೧೬ |
| ವಿಜಾಪುರ . . . . | ೧೦೭೯೭೦ | ೧೧೧೦೩೦. | ೧೨೯೬೯೦ | ೩೪೮೬೯೦ | ೧೭.೫ |
| ಕಾನಡಾ . . . . | ೨೧೮೭೦ | ೩೧೦೨೦ | ೧೯೯೬೦ | ೭೨೮೫೦ | ೮ |
| | ೨೪೮೭೫೦ | ೨೬೯೯೬೦ | ೩೦೬೬೩೦ | ೮೨೫೩೪೦ | ೧೪·೧ |

# ೯ನೇ ಭಾಗ.

## ನ್ಯಾಯ.

೧೮೧೮-೧೮೫೬.—ಪೇಶವನ ರಾಜ್ಯವನ್ನು ಆಕ್ರಮಿಸಿದ ಬಳಿಕ ಕೃಷ್ಣಾ, ತುಂಗ ಭದ್ರಾ, ಈ ಯೆರಡು ಹೊಳೆಗಳ ನಡುವಿನ ಪ್ರದೇಶಕ್ಕೆ "ದಕ್ಷಿಣ ಮಹಾರಾಷ್ಟ್ರ ದುವಾಬ" ಯೆಂಬ ಹೆಸರಿಟ್ಟು ಈ ಶೀಮೆಯನ್ನು ದಂಡಿನ ಸಹಾಯದಿಂದ ಆಕ್ರಮಿಸಿದವನಾದ ಜನರಲ್ ಮನ್ರೋ ಯೆಂಬ ದಂಡಿನ ಮುಖ್ಯಾಧಿಕಾರಸ್ಥನ ಕೈಯಲ್ಲಿ ಇದನ್ನು ಕೊಟ್ಟರು. ಅವನಿಗೆ "ಪ್ರಿನ್ಸಿಪಲ್ ಕಲೆಕ್ಟರ ಮತ್ತು ಪೋಲಿಟಿಕಲ ಏಜಂಟ"ನೆಂಬ ಪದವಿಯನ್ನು ಕೊಟ್ಟಿದ್ದರು. ಅವನು ದಿವಾಣೀ, ಫೌಜದಾರೀ, ಮುಲಕೀ, ಪೋಲೀಸ, ಈ ನಾಲ್ಕೂ ಬಗೆಯ ಅಧಿಕಾರವನ್ನು ಪೂರ್ಣವಾಗಿ ನಡಿಸುತ್ತಿದ್ದದ್ದಲ್ಲದೆ, ದಕ್ಷಿಣ ಮಹಾರಾಷ್ಟ್ರದ ಜಹಾಗೀರದಾರರಿಗೆ ವರಿಷ್ಠಾಧಿಕಾರಿಯಾಗಿದ್ದನು. ಜನರಲ್ ಮನ್ರೋನು ಧಾರವಾಡದಲ್ಲಿ ಇರುತ್ತಿದ್ದನು; ಆದ್ದರಿಂದ ಧಾರವಾಡವೇ ದಕ್ಷಿಣ ಮಹಾರಾಷ್ಟ್ರ ದುವಾಬದ ಮುಖ್ಯ ಪಟ್ಟಣವಾಗಿತ್ತು. ಈ ಶೀಮೆಯಲ್ಲಿ ಆಗ ೨೧ ತಾಲೂಕುಗಳನ್ನು ಮಾಡಿ, ವೊಂದೊಂದು ತಾಲೂಕಿಗೆ ವೊಬ್ಬೊಬ್ಬ ಮಾಮಲೇದಾರನನ್ನು ನೇಮಿಸಿದರು. ಮಾಮಲೇದಾರನ ಕೈಕೆಳಗೆ ಮೂವರಾಗಲಿ ನಾಲ್ವರು ಜಿಲ್ಲೇದಾರರೆಂಬ ಕಾರಕೂನರಿರುತ್ತಿದ್ದರು. ಅವರ ಸಹಾಯದಿಂದ ಅವನು ತನ್ನ ತಾಲೂಕಿನಲ್ಲಿ ಮುಲಕೀ, ಫೌಜದಾರೀ, ಪೋಲೀಸ ಅಧಿಕಾರಗಳನ್ನು ನಡಿಸುತ್ತಿದ್ದನು.

ಆರಂಭದಲ್ಲಿ ಸಣ್ಣ ಸಣ್ಣ ದಿವಾಣೀ ವ್ಯಾಜ್ಯಗಳನ್ನು ಹಳ್ಳಿಗಳ ಗೌಡ ಶಾನಭೋಗರು ವಿಚಾರಿಸುತ್ತಿದ್ದರು; ಅವಕ್ಕಿಂತ ಹೆಚ್ಚಿನ ವ್ಯಾಜ್ಯಗಳು ಮಾಮಲೇದಾರರ ಮುಂದೆ ಬರುವವು. ಅವುಗಳನ್ನು ಮಾಮಲೇದಾರರು ಪಂಚರ ವಿಚಾರಣೆಗೆ ಕಳಿಸಿ, ಪಂಚರ ನಿರ್ಣಯದ ಮೇಲೆ ಅಪೀಲಾದರೆ ಅದನ್ನು ತಾವು ವಿಚಾರಿಸುವರು. ಎಲ್ಲಕ್ಕೂ ಹೆಚ್ಚಿನ ದಿವಾಣೀ ವ್ಯಾಜ್ಯಗಳು ಪ್ರಿನ್ಸಿಪಲ್ ಕಲೆಕ್ಟರನ ಕೋರ್ಟಿನಲ್ಲಿ ದಾಖಲಾಗುವವು. ಅವನಾದರೂ ಪಂಚರ ವಿದ್ಯಮಾನವಾಗಿ ಅವುಗಳ ನಿರ್ಣಯ ಮಾಡಿಸಿ, ಅಪೀಲುಗಳನ್ನು ತಾನು ಸ್ವತಃ ವಿಚಾರಿಸುವನು. ಸನ್ ೧೮೨೧ನೇ ವರ್ಷದ ಸುಮಾರಿನಲ್ಲಿ ಅದಾಲತ ಪೇಷ್ಕರರೆಂಬ ಕಾಮದಾರರನ್ನು ಪ್ರತಿ ವೊಂದು ತಾಲೂಕಿನಲ್ಲಿ ನೇಮಿಸಿದರು. ಅವನು ದಿವಾಣೀ ವಾಜ್ಯಗಳ ಕೆಲಸವನ್ನೇ ನೋಡ ಬೇಕೆಂದು ಸರಕಾರದವರ ಉದ್ದೇಶವು. ಆದರೆ ಅವನು ವಾಡಿಕೆಯಾಗಿ ಮಾಮಲೇದಾರನ ಕೈಕೆಳಗೆ ವೊಬ್ಬ ಕಾರಕೂನನಂತೆ ಕೆಲಸ ಮಾಡುವನು. ಸನ್ ೧೮೨೭ರಲ್ಲಿ ಹೊಸ ಕಾಯಿದೆಗಳಾದ ಬಳಿಕ ಕ್ರಮ ಕ್ರಮವಾಗಿ ಸದರ ಅಮೀನರನ್ನೂ ಮುನಸೀಫರನ್ನೂ ನೇಮಿಸಿ, ಪೇಷ್ಕರನ ದಿವಾಣೀ ಕೆಲಸವನ್ನು ತೆಗಿದರು, ಮತ್ತೂ ಪ್ರಿನ್ಸಿಪಲ್ ಕಲೆಕ್ಟರನ ಕೈಕೆಳಗೆ ರಜಿಸ್ಟ್ರಾರನೆಂಬ ದಿವಾಣೀ ಅಮಲದಾರನನ್ನು ನೇಮಿಸಿದರು. ಸನ್ ೧೮೩೦ರಲ್ಲಿ ದಕ್ಷಿಣ ಮಹಾರಾಷ್ಟ್ರ ದುವಾಬದ ಕೆಲವು ತಾಲೂಕುಗಳನ್ನು ತಕ್ಕೊಂಡು ಸೊಲ್ಲಾಪುರ ಜಿಲ್ಲೆಯನ್ನು ಬೇರೆ ಮಾಡಿದರು. ಆ ಮೇಲೆ ೧೮೩೦ನೇ ವರ್ಷದ ೭ನೇ ಕಾಯಿದೆಯಿಂದ ಉಳಿದ ತಾಲೂಕುಗಳಿಗೆಲ್ಲ ಧಾರವಾಡ ಜಿಲ್ಲೆ ಯೆಂಬ ಹೆಸರು ಕೊಟ್ಟು ಸನ್ ೧೮೨೭ನೇ ವರ್ಷದ ಕಾಯಿದೆಗಳ ಅಮಲು ಈ ಜಿಲ್ಲೆಯಲ್ಲಿ ಶುರು ಮಾಡಿದರು. ಮುಂದೆ ಕಾರಭಾರದ ಕೆಲಸವು ದಿನ ದಿನಕ್ಕೆ ಬೆಳಿಯುತ್ತ ನಡಿದದ್ದರಿಂದ ಸನ್ ೧೮೩೬ರಲ್ಲಿ ಮುಲಕೀ ಫೌಜದಾರೀ ಕೆಲಸಗಳಿಗಾಗಿ ದಕ್ಷಿಣ ಮಹಾರಾಷ್ಟ್ರದ ಉತ್ತರ ಭಾಗದಲ್ಲಿ ಹತ್ತು ತಾಲೂಕುಗಳನ್ನು ಮಾಡಿ, ಆ ಭಾಗಕ್ಕೆ ಬೆಳಗಾವೀ ಜಿಲ್ಲೆ ಯೆಂದು ಹೆಸರಿಟ್ಟರು. ಆದರೂ ದಿವಾಣೀ ಕೆಲಸದ ಸಂಬಂಧದಲ್ಲಿ ಬೆಳಗಾವೀ ಜಿಲ್ಲೆಯು ಧಾರವಾಡ ಡಿಸ್ಟ್ರಿಕ್ಟ ಜಡಜನ ಅಧಿಕಾರಕ್ಕೆ ವೊಳಗಾಗಿತ್ತು. ಈ ಪ್ರಕಾರ ಸನ್ ೧೮೩೬ರ ವರೆಗೆ ದಕ್ಷಿಣ ಮಹಾರಾಷ್ಟ್ರ ದುವಾಬದಲ್ಲಿ ಧಾರವಾಡ, ಬೆಳಗಾವಿ, ಸೊಲ್ಲಾಪುರ, ಯೆಂಬ ಮೂರು ಬೇರೆ ಬೇರೆ ಜಿಲ್ಲೆಗಳಾದ ಬಳಿಕ ಆಯಾ ಜಿಲ್ಲೆಯ ಕೆಲಸವನ್ನು ಅಲ್ಲಲ್ಲಿಯ ಕಲೆಕ್ಟರರು ನೋಡ ಹತ್ತಿದರು.

## ಧಾರವಾಡ ಜಿಲ್ಲೆ.

**ದಿವಾಣೀ ಕೋರ್ಟುಗಳು.**—ಸನ್ ೧೮೮೬ರಲ್ಲಿ ಈ ಜಿಲ್ಲೆಯಲ್ಲಿ ಬಂಕಾಪುರ, ಡಂಬಳ, ಧಾರವಾಡ, ಹಾನಗಲ್ಲು, ಹುಬ್ಬಳ್ಳಿ, ಕೋಡ, ನವಲಗುಂದ, ರಾಣೀಬಿ

ನ್ನೂರು, ಯೆಂಬ ೮ ತಾಲೂಕುಗಳಿದ್ದವು. ಧಾರವಾಡದಲ್ಲಿ ಜಿಲ್ಲಾ ಜಡಜನ ಕೋರ್ಟು, ಅಸಿಷ್ಟಾಂಟ ಜಡಜನ ಕೋರ್ಟು, ಪ್ರಿನ್ಸಿಪಲ್ ಸದರಅಮೀನನ ಕೋರ್ಟು, ಯೆಂಬ ಮೂರು ಕೋರ್ಟುಗಳಿದ್ದವು. ಡಿಸ್ಟ್ರಿಕ್ಟ ಜಡಜ, ಅಸಿಷ್ಟಾಂಟ ಜಡಜ, ಇವರ ಅಧಿಕಾರವು ಇಡೀ ಜಿಲ್ಲೆಯಲ್ಲಿ ನಡಿಯುತ್ತಿತ್ತು. ಪ್ರಿನ್ಸಿಪಲ್ ಸದರ ಅಮೀನನ ಅಧಿಕಾರವು ಧಾರವಾಡ ತಾಲೂಕಿನಲ್ಲಿಯೂ ಬೆಳಗಾವೀ ಜಿಲ್ಲೆಯೊಳಗಿನ ಕೆಲವು ಹಳ್ಳಿಗಳಲ್ಲಿಯೂ ನಡಿಯುತ್ತಿತ್ತು. ಹುಬ್ಬಳ್ಳಿಯಲ್ಲಿ ಸದರಅಮೀನನ ಕೋರ್ಟು ಇತ್ತು, ಅವನ ಅಧಿಕಾರವು ಆ ತಾಲೂಕಿನಲ್ಲಲ್ಲದೆ ಬಂಕಾಪುರ, ನವಲಗುಂದ ತಾಲೂಕುಗಳ ಕೆಲ ಕೆಲವು ಹಳ್ಳಿಗಳಲ್ಲಿ ನಡಿಯುತ್ತಿತ್ತು. ಹಾವೇರಿಯಲ್ಲಿ ಮುನಸೀಫನ ಕೋರ್ಟು ಇತ್ತು; ಅವನ ಅಧಿಕಾರವು ರಾಣೀಬಿನ್ನೂರು, ಹಾನಗಲ್ಲು, ಕೋಡ, ಈ ಮೂರು ತಾಲೂಕುಗಳಲ್ಲಲ್ಲದೆ ಬಂಕಾಪುರದ ಕೆಲವು ಗ್ರಾಮಗಳಲ್ಲಿ ನಡಿಯುತ್ತಿತ್ತು. ಮುಂದೆ ಸನ್ ೧೮೬೯ರಲ್ಲಿ ಬೆಳಗಾವೀ ಜಿಲ್ಲೆಗೆ ಬೇರೊಬ್ಬ ಜಡಜನನ್ನು ನೇಮಿಸಿ, ಧಾರವಾಡ ಜಿಲ್ಲೆಯಲ್ಲಿ ೧೧ ತಾಲೂಕುಗಳನ್ನು ಮಾಡಿದರು. ಮತ್ತೂ ಧಾರವಾಡ, ಹಾವೇರಿ, ಗದಗು, ಈ ಮೂರು ಸ್ಥಳಗಳಲ್ಲಿ ಸಬಜಡಜರನ್ನು ನೇಮಿಸಿ, ಧಾರವಾಡದ ಸಬಜಡಜನ ಅಧಿಕಾರಕ್ಕೆ ಧಾರವಾಡ, ಹುಬ್ಬಳ್ಳಿ, ಬಂಕಾಪುರ, ಕಲಘಟಗಿ, ಈ ತಾಲೂಕುಗಳನ್ನೂ, ಹಾವೇರಿಯ ಸಬಜಡಜನ ಅಧಿಕಾರಕ್ಕೆ ಕರ್ಜಗಿ, ಹಾನಗಲ್ಲು, ಕೋಡ, ರಾಣೀಬಿನ್ನೂರು, ಈ ನಾಲ್ಕು ತಾಲೂಕುಗಳನ್ನೂ, ಗದಗಿನ ಸಬಜಡಜನ ಅಧಿಕಾರಕ್ಕೆ ಗದಗು, ನವಲಗುಂದ, ರೋಣ, ಈ ಮೂರು ತಾಲೂಕುಗಳನ್ನೂ ವೊಳ ಪಡಿಸಿದರು.

ಸನ್ ೧೮೭೦ರಲ್ಲಿ ಡಿಸ್ಟ್ರಿಕ್ಟ ಕೋರ್ಟು ಸಹಿತ ನಾಲ್ಕು ಕೋರ್ಟುಗಳಲ್ಲಿ ಕೂಡಿ ೨೩೦೩ ವ್ಯಾಜ್ಯಗಳ ನಿರ್ಣಯವಾಯಿತು. ಸನ್ ೧೮೭೫ರಲ್ಲಿ ಹುಬ್ಬಳ್ಳಿಯ ಕೋರ್ಟು ಹೊಸದಾಗಿ, ೫ ಕೋರ್ಟುಗಳಲ್ಲಿ ಕೂಡಿ ೩೭೬೦ ವ್ಯಾಜ್ಯಗಳ ನಿರ್ಣಯವಾಯಿತು. ಇವೇ ೫ ಕೋರ್ಟುಗಳಲ್ಲಿ ಸನ್ ೧೮೮೦ರಲ್ಲಿ ೩೩೩೪ ವಾಜ್ಯಗಳ ನಿರ್ಣಯವಾಯಿತು. ಸನ್ ೧೮೮೩ರಲ್ಲಿ ಧಾರವಾಡದ ಸಬಜಡಜನ ಅಧಿಕಾರಕ್ಕೆ ಧಾರವಾಡ, ಕಲಘಟಗಿ ತಾಲೂಕುಗಳು, ಹುಬ್ಬಳ್ಳಿಯ ಸಬಜಡಜನ ಅಧಿಕಾರಕ್ಕೆ ಹುಬ್ಬಳ್ಳಿ, ಬಂಕಾಪುರ, ತಾಲೂಕುಗಳು, ಗದಗಿನ ಸಬಜಡಜನ ಅಧಿಕಾರಕ್ಕೆ ಗದಗು, ನವಲಗುಂದ, ರೋಣ ತಾಲೂಕುಗಳು, ಹಾವೇರಿಯ ಸಬಜಡಜನ ಅಧಿಕಾರಕ್ಕೆ ಹಾನಗಲ್ಲು, ಕರ್ಜಗಿ, ಕೋಡ, ರಾಣೀಬಿನ್ನೂರು ತಾಲೂಕುಗಳು ಶೇರಿದ್ದವು.

## ಧಾರವಾಡ—ವ್ಯಾಜ್ಯಗಳ ವಿವರ—೧೮೭೦-೧೮೮೨.

| ವರ್ಷ. | ವ್ಯಾಜ್ಯಗಳ ಸಂಖ್ಯೆ. | ಸರಾಸರೀ ರಕಮು. | ಬಿನ್ನ ತಕ್ರಾರಿ. | ತಕ್ರಾರಿ. |
|---|---|---|---|---|
| ೧೮೭೦ | ೨೩೦೩ | ೨೧೩ | ೧೭೮೯ | ೫೧೪ |
| ೧೮೭೧ | ೨೮೦೦ | ೨೪೦ | ೨೧೮೮ | ೬೧೬ |
| ೧೮೭೨ | ೨೫೧೬ | ೩೦೮ | ೨೦೮೦ | ೪೩೬ |
| ೧೮೭೩ | ೨೪೯೩ | ೨೪೩ | ೧೯೪೩ | ೫೫೦ |
| ೧೮೭೪ | ೨೫೭೭ | ೧೮೨ | ೨೦೪೪ | ೫೩೩ |
| ೧೮೭೫ | ೩೮೩೧ | ೨೦೪ | ೩೦೮೨ | ೭೪೯ |
| ೧೮೭೬ | ೪೭೬೯ | ೧೮೫ | ೩೯೭೬ | ೭೯೩ |
| ೧೮೭೭ | ೩೪೬೦ | ೧೪೯ | ೨೮೦೧ | ೬೫೯ |
| ೧೮೭೮ | ೪೨೧೨ | ೧೫೯ | ೩೫೬೯ | ೬೪೩ |
| ೧೮೭೯ | ೪೦೭೩ | ೧೩೬ | ೩೪೦೬ | ೬೬೭ |
| ೧೮೮೦ | ೩೩೩೨ | ೧೫೬ | ೨೭೬೦ | ೫೭೨ |
| ೧೮೮೧ | ೪೦೨೪ | ೧೫೧ | ೨೮೬೧ | ೧೧೬೩ |
| ೧೮೮೨ | ೩೭೪೨ | ೧೪೭ | ೨೬೧೭ | ೧೧೨೫ |

ಸ್ಮಾಲಕಾಜ ಕೋರ್ಟು.— ಸನ್ ೧೮೬೯ರ ವರೆಗೆ ಹುಬ್ಬಳ್ಳಿಯಲ್ಲಿ ಸದರ ಅಮೀನ ಕೋರ್ಟು ಇತ್ತು. ಆ ವರ್ಷ ಅದನ್ನು ಮುರಿದು ಧಾರವಾಡಕ್ಕೂ ಹುಬ್ಬಳ್ಳಿಗೂ ಕೂಡಿ ವೊಬ್ಬ ಸ್ಮಾಲಕಾಜ ಜಡಜನನ್ನು ನೇಮಿಸಿದರು. ಆದರೆ ಮುಂದೆ ಆರು ವರ್ಷದ ಅನುಭವದಿಂದ ಸ್ಮಾಲಕಾಜ ಜಡಜನಿಗೆ ಭರಪೂರ ಕೆಲಸವಿಲ್ಲೆಂದು ನೋಡಿ, ಸನ್ ೧೮೭೫ರಲ್ಲಿ ಸ್ಮಾಲಕಾಜ ಕೋರ್ಟು ಮುರಿದು, ಹುಬ್ಬಳ್ಳಿಗೆ ವೊಬ್ಬ ೨ನೇ ವರ್ಗದ ಸಬ ಜಡಜನನ್ನು ನೇಮಿಸಿ, ಧಾರವಾಡದ ೧ನೇ ವರ್ಗದ ಸಬಜಡಜನಿಗೆ ಸ್ಮಾಲಕಾಜದ ಅಧಿಕಾರ ಕೊಟ್ಟರು.

ನೊಂದಣೀ ಖಾತೆ.—೧೧ ತಾಲೂಕುಗಳಲ್ಲಿ ವೊಬ್ಬೊಬ್ಬ ಸಬರಜಿಸ್ಟ್ರಾರನೆಂಬ ನೊಂದಣೀ ಕಾರಕೂನನಿರುತ್ತಾನೆ. ಕಲೆಕ್ಟರನು ಡಿಸ್ಟ್ರಿಕ್ಟ ರಜಿಸ್ಟ್ರಾರನೆಂಬ ಹುದ್ದೆಯಿಂದ ಇವರ ಮೇಲಧಿಕಾರಿಯಾಗಿರುತ್ತಾನೆ. ಇದಲ್ಲದೆ ಇನಸ್ಪೆಕ್ಟರ ಜನರಲ್ ಆಫ್ ರಜಿಸ್ಟ್ರೇಶನ್ ಯೆಂಬವನೊಬ್ಬ ಬೇರೆ ಅಧಿಕಾರಿಯು ಸಬರಜಿಸ್ಟ್ರಾರ ಜನರ ಕೆಲಸವನ್ನು ತಪಾಸಿಸುತ್ತಿರುತ್ತಾನೆ. ಸನ್ ೧೮೮೩ರಲ್ಲಿ ೯೧೦ ರೂಪಾಯಿ ರಜಿಸ್ಟ್ರೇಶನ್ ಫೀ

ವಸೂಲಾಗಿ, ೬೯೮೦ ರೂಪಾಯಿ ಖರ್ಚು ಹೋಗಲಾಗಿ, ಸರಕಾರಕ್ಕೆ ೧೯೩೦ ರೂಪಾಯಿ ಶಿಲಕು ಉಳೀತು. ಆ ವರ್ಷ ವೊಟ್ಟಗೆ, ೪೫೦೫ ದಸ್ತೈವಜುಗಳ ನೊಂದಣೀ ಆಯಿತು; ಅವುಗಳಲ್ಲಿ ಸ್ಥಾವರ ಮಾಲಿನ ಬಾಬತು ೪೩೩೧, ಜಂಗಮ ಮಾಲಿನ ಬಾಬತು, ೧೩೫, ಮೃತ್ಯು ಪತ್ರಗಳು ೩೯.

ಮಾಜಿಸ್ಟ್ರೇಟ ಖಾತೆ.—ಸನ್ ೧೮೮೪ರಲ್ಲಿ ವೊಟ್ಟಗೆ ೩೦ ಜನ ಮಾಜಿಸ್ಟ್ರೇಟರಿದ್ದರು; ಅವರಲ್ಲಿ ೭ ಮಂದಿ ೧ನೇ ವರ್ಗದವರು, ೨ನೇ ೩ನೇ ವರ್ಗದವರು ಕೂಡಿ ೨೩ ಜನ. ಇವರೆಲ್ಲರ ಮೇಲೆ ಡಿಸ್ಟ್ರಿಕ್ಟ ಮಾಜಿಸ್ಟ್ರೇಟನೆಂದರೆ ಕಲೆಕ್ಟರನ ಮೇಲ್ವಿಚಾರಣೆಯು ನಡಿಯುತ್ತದೆ. ಯಾವತ್ತು ಮಾಜಿಸ್ಟ್ರೇಟರು ಕೂಡಿ ಸನ್ ೧೮೮೨ರಲ್ಲಿ ೧೯೮೩ ಫೌಜದಾರೀ ವ್ಯಾಜ್ಯಗಳ ನಿರ್ಣಯ ಮಾಡಿದರು.

ಹಳ್ಳಿಗಳಲ್ಲಿ ಗೌಡನು ಸೇತಸನದೀ ಹಳಬರ ಸಹಾಯದಿಂದ ಪೋಲೀಸರ ಕೆಲಸ ಮಾಡುತ್ತಾನೆ.

ಗುಹ್ನೇಗಾರರ ಜಾತಿಗಳು.—ಕೊರವರು, ಲಮಾಣಿಗಳು, ವೊಡ್ಡರು, ಮುಂತಾದ ಜಾತಿಗಳಲ್ಲಿ ಬಹು ಜನರು ಕಳವಿನಿಂದ ಜೀವಿಸುತ್ತಾರೆ. ಇವರಲ್ಲದೆ ದರೋಡೆಖೋರರು ಬೇರೆ; ಅವರು ಇಂಥಾ ಜಾತಿಯವರೇ ಯೆಂಬ ನೇಮವಿಲ್ಲ. ಗುಹ್ನೆಗಳ ಗೊತ್ತು ಹತ್ತದಿರುವದಕ್ಕೆ ಮುಖ್ಯ ಕಾರಣಗಳೇನಂದರೆ—ಗುಹ್ನೇಗಾರರನ್ನು ಬಲ್ಲವರು ತಾವು ಕೋರ್ಟಿಗೆ ಸಾಕ್ಷಿಗೆ ಹೋಗ ಬೇಕಾಗುವದೆಂಬ ಹೆದರಿಕೆಯಿಂದ ಅವರ ಹೆಸರುಗಳನ್ನು ಹೇಳುವದಿಲ್ಲ; ಸಾಕ್ಷೀದಾರರು ಮನೆ ಮಾರು ಬಿಟ್ಟು ಹೋಗಿ ಕೋರ್ಟಿನಲ್ಲಿ ಬಿಸಿಲು ತಿನ್ನುತ್ತ ಕೂಡ್ರ ಬೇಕಾಗುತ್ತದೆ; ಅವರ ಖರ್ಚಿಗೆ ಸಾಕಾಗುವಷ್ಟು ಭತ್ತೆ ಸಹ ದೊರಿಯುವದಿಲ್ಲ; ಗುಹ್ನೆಗಳು ಮಾಜಲಿಕ್ಕೆ ಇದೇ ಮುಖ್ಯ ಕಾರಣವಿರುತ್ತದೆ. ಇದಲ್ಲದೆ ದಕ್ಷಿಣದಲ್ಲಿ ಮೈಸೂರು ಶೀಮೆ, ಪೂರ್ವದಲ್ಲಿ ನಿಜಾಮನ ಶೀಮೆ, ಜಿಲ್ಲೆಯ ನಡುವೂ ಉತ್ತರದಲ್ಲಿಯೂ ಪಟವರ್ಧನರ ಶೀಮೆಗಳು ಇರುವ ಕಾರಣ ಗುಹ್ನೆಗಾರರು ಅತ್ತ ಕಡೆಗೆ ಓಡಿ ಹೋಗುತ್ತಾರೆ.

ಪೋಲೀಸ ಖಾತೆ.—ಈ ಜಿಲ್ಲೆಯಲ್ಲಿ ಸನ್ ೧೮೮೨ರಲ್ಲಿ ಪೋಲೀಸ ಅಮಲದಾರರೂ ಶಿಪಾಯಿಗಳೂ ಕೂಡಿ ವೊಟ್ಟಗೆ ೭೩೩ ಜನರಿದ್ದರು; ಇವರಲ್ಲಿ ೧೧೩ ಜನ ಅಮಲದಾರರು, ಉಳಿದವರು ಶಿಪಾಯಿಗಳು. ಇವರೆಲ್ಲ ಡಿಸ್ಟ್ರಿಕ್ಟ ಸುಪರಿಂಟೆಂಡೆಂಟನೆಂಬ ಯುರೋಪಿಯನ್ ಮುಖ್ಯಾಧಿಕಾರಿಗೆ ಅಂಕಿತರಾದವರು. ಇವರಲ್ಲಿ ೫೮ ಜನ ಅಮಲದಾರರೂ, ೩೩೦ ಜನ ಶಿಪಾಯಿಗಳೂ ಮುಸಲ್ಮಾನರು; ೧೧ ಜನ ಅಮಲದಾರರೂ, ೧೨ ಜನ ಶಿಪಾಯಿಗಳೂ ಬ್ರಾಹ್ಮಣರು; ೯ ಜನ ಅಮಲದಾರರೂ, ೩೩ ಜನ ಶಿಪಾಯಿಗಳೂ ರಜಪೂತರು; ೩ ಜನ ಅಮಲದಾರರೂ, ೮ ಜನ ಶಿಪಾಯಿಗಳೂ ಲಿಂಗವಂತರು; ೨೭ ಜನ ಅಮಲದಾರರೂ, ೧೭೮ ಜನ ಶಿಪಾಯಿಗಳೂ ಆರೇರು; ೮ ಜನ ಅಮಲದಾರರೂ, ೪೦ ಜನ ಶಿಪಾಯಿಗಳೂ ಬೇರೆ ಜಾತಿಗಳ ಹಿಂದೂ ಜನರು; ಇಬ್ಬರು ಅಮಲದಾರರೂ, ಮೂವರು ಶಿಪಾಯಿಗಳೂ ಕ್ರಿಸ್ತಿಯನ್ನರು. ಯಾವತ್ತು ಜನ ಪೋಲೀಸರ ಸಂಬಳ,

ಭತ್ತೆ ಮುಂತಾದದ್ದು ಕೂಡಿ ವರ್ಷದ ಖರ್ಚು ೧೨೧೬೨ ರೂಪಾಯಿ. ಇದರಲ್ಲಿ ಸುಪರಿಂಟೆಂಡೆಂಟನ ಸಂಬಳ ೯೬೦೦ ರೂಪಾಯಿ, ಭತ್ತೆ ೨೪೦೦ ರೂಪಾಯಿ, ಅಂತೂ ೧೨೦೦೦ ರೂಪಾಯಿ; ಅವನ ಕಚೇರಿಯವರ ಸಂಬಳ ಭತ್ತೆ ಕೂಡಿ ೨೪೭೦ ರೂಪಾಯಿ; ಉಳಿದದ್ದೆಲ್ಲ ಅಮಲದಾರರಿಗೂ ಶಿಪಾಯಿಗಳಿಗೂ ಸಲ್ಲುವ ಸಂಬಳ ಭತ್ತೆ ಮುಂತಾದದ್ದು. ಧಾರವಾಡ ಜಿಲ್ಲೆಯ ಕ್ಷೇತ್ರಫಲ ೪೫೩೪ ಚಚ್ಚೌಕು ಮೈಲು, ಜನಸಂಖ್ಯ ೮೮೨೯೦೭ ಸನ್ ೧೮೮೧ರಲ್ಲಿ ಇತ್ತು. ಇದರಿಂದ ೬ ಚಚ್ಚೌಕು ಮೈಲಿನ ಕ್ಷೇತ್ರದಲ್ಲಿ ವಾಸಿಸುವ ೧೨೦೫ ಜನ ನಿವಾಸಿಗಳಿಗೆ ವೊಬ್ಬನಂತೆ ಪೋಲೀಸನಾಗುತ್ತಾನೆ; ಪ್ರತಿ ವೊಬ್ಬ ನಿವಾಸಿಗೆ ೨ ಆಣೆಯಂತೆ ವೋಲೀಸರ ಖರ್ಚು ಬೀಳುತ್ತದೆ.

ಗುಹ್ನೆಗಳು.—ಸನ್ ೧೮೮೨ರ ಅಖೇರ ವರೆಗೆ ಮುಗಿಯುವ ವೊಂಬತ್ತು ವರ್ಷಗಳಲ್ಲಿ ೨೧೭ ಖೂನಗಳು, ೬೩ ಸದೋಷ ಮನುಷ್ಯ ವಧಗಳು, ೨೧೧ ಭಾರೀ ದುಖಾಪತುಗಳು, ೭೨೭ ದರೋಡೆ, ಕಳವು ೩೨೯೩೮ ಬೇರೆ ಪ್ರಕಾರದ ಗುಹ್ನೆಗಳು ಆದವು. ಇದರಿಂದ ಸರಾಸರೀ ಮಾನದಿಂದ ವರ್ಷಕ್ಕೆ ೩೭೯೬ ಗುಹ್ನೆಗಳಾಗುತ್ತವೆ; ಅಂದರೆ ಪ್ರತಿ ೨೧೧ ಜನರಲ್ಲಿ ವೊಬ್ಬನು ಪ್ರತಿ ವರ್ಷ ವೊಂದು ಗುಹ್ನೆ ಮಾಡುತ್ತಾನೆಂದು ಫಲಿತವಾಗುತ್ತದೆ.

ತುರಂಗಗಳು.—ಡಿಸ್ಟ್ರಿಕ್ಟ ಜೇಲೆಂಬ ದೊಡ್ಡ ತುರಂಗ ಹೊರ್ತಾಗಿ ಈ ಜಿಲ್ಲೆಯಲ್ಲಿ ಮೂರು ಸಣ್ಣ ತುರಂಗಗಳಿರುತ್ತವೆ. ಸನ್ ೧೮೮೨ರ ಕಡೇ ತಾರೀಖಿನಲ್ಲಿ ಧಾರವಾಡದ ತುರಂಗದಲ್ಲಿ ೧೭೧ ಜನ ಗಂಡಸರು, ೩೬ ಜನ ಹೆಂಗಸರು, ಅಂತೂ ೨೦೭ ಜನ ಕೈದಿಗಳಿದ್ದರು. ಸನ್ ೧೮೮೩ರ ಅಖೇರ ವರೆಗೆ ೩೯೯ ಜನ ಗಂಡಸರು, ೭೯ ಜನ ಹೆಂಗಸರು, ಅಂತೂ ೪೭೮ ಜನ ಹೊಸ ಕೈದಿಗಳು ಬಂದರು; ಮತ್ತೂ ೪೦೦ ಜನ ಗಂಡಸರು, ೬೭ ಜನ ಹೆಂಗಸರು, ಅಂತೂ ೪೬೭ ಜನ ಕೈದಿಗಳು ಬಿಡುಗಡೆಯಾದರು. ಸದರೀ ವರ್ಷದಲ್ಲಿ ಸರಾಸರಿಯಿಂದ ಪ್ರತಿ ದಿವಸ ೧೯೯ ಜನ ಕೈದಿಗಳಿದ್ದರು.

## ಬೆಳಗಾವೀ ಜಿಲ್ಲೆ.

ದಿವಾಣೀ ಕೋರ್ಟುಗಳು.—ಈ ಜಿಲ್ಲೆಯು ಸನ್ ೧೮೬೯ರ ವರೆಗೆ ಧಾರವಾಡದ ಜಡಜನ ಅಧಿಕಾರಕ್ಕೊಳಗಾಗಿತ್ತೆಂದು ಹಿಂದೆ ಹೇಳಿದ್ದೇವೆ. ಸನ್ ೧೮೭೦ರಲ್ಲಿ ಬೆಳಗಾವಿಯ ಜಡಜ ಕೋರ್ಟು ಬೇರೆ ಆಯಿತು. ಆ ವರ್ಷದಿಂದ ಸನ್ ೧೮೮೦ರ ವರೆಗೆ ಜಡಜ ಕೋರ್ಟು ಸಹಿತ ೫ ದಿವಾಣೀ ಕೋರ್ಟುಗಳಿದ್ದವು. ಅವುಗಳಲ್ಲಿ ಸನ್ ೧೮೭೦ರಲ್ಲಿ ೩೪೨೧, ಸನ್ ೧೮೭೫ರಲ್ಲಿ ೪೭೩೩, ಸನ್ ೧೮೮೦ರಲ್ಲಿ ೩೫೨೪ ವ್ಯಾಜ್ಯಗಳ ನಿರ್ಣಯವಾಯಿತು. ಬೆಳಗಾವಿಯಲ್ಲಿ ಜಡಜ ಕೋರ್ಟಲ್ಲದೆ ಇನ್ನೊಂದು ಫರ್ಸ್ಟ ಕ್ಲಾಸ ಸಬಜಡಜ ಕೋರ್ಟು, ಚಿಕ್ಕೋಡಿ, ಸವದತ್ತಿ, ಅಥಣಿ, ಈ ಮೂರು ಗ್ರಾಮಗಳಲ್ಲಿ ವೊಂದೊಂದು ಸೇಕಂಡ ಕ್ಲಾಸ ಸಬಜಡಜನ ಕೋರ್ಟುಗಳಿರುತ್ತವೆ.

## ಬೆಳಗಾವಿ ವಾಜ್ಯಗಳ ವಿವರ.—೧೮೭೦-೧೮೮೨.

| ವರ್ಷ. | ವ್ಯಾಜ್ಯಗಳು. | ಸರಾಸರಿ ಕಿಮ್ಮತ್ತು. | ಎಕ್ಸ ಪಾರ್ಟೀ. | ಪಾರ್ಟೀ. | ವರ್ಷ. | ವ್ಯಾಜ್ಯಗಳು. | ಸರಾಸರಿ ಕಿಮ್ಮತ್ತು. | ಎಕ್ಸ ಪಾರ್ಟೀ. | ಪಾರ್ಟೀ. |
|---|---|---|---|---|---|---|---|---|---|
| ೧೮೭೦ | ೨೪೨೧ | ೧೧೦ | ೨೬೩೨ | ೭೮೯ | ೧೮೭೭ | ೩೫೮೧ | ೨೪೩ | ೩೬೯೨ | ೮೮೯ |
| ೧೮೭೧ | ೩೭೪೦ | ೧೪೨ | ೨೯೬೫ | ೭೭೫ | ೧೮೭೮ | ೩೮೪೧ | ೧೧೪ | ೩೧೩೧ | ೭೧೦ |
| ೧೮೭೨ | ೪೧೦೦ | ೧೩೩ | ೩೩೭೨ | ೭೨೮ | ೧೮೭೯ | ೩೬೩೮ | ೧೪೭ | ೨೯೨೬ | ೭೧೨ |
| ೧೮೭೩ | ೪೭೨೩ | ೧೪೭ | ೩೮೩೫ | ೮೮೮ | ೧೮೮೦ | ೩೫೨೪ | ೨೦೨ | ೨೭೮೩ | ೭೪೧ |
| ೧೮೭೪ | ೪೨೯೫ | ೧೩೨ | ೩೫೯೨ | ೭೦೩ | ೧೮೮೧ | ೩೩೮೭ | ೨೨೨ | ೨೬೧೨ | ೭೭೫ |
| ೧೮೭೫ | ೪೭೩೩ | ೨೦೪ | ೩೮೦೩ | ೯೩೦ | ೧೮೮೨ | ೩೨೪೩ | ೧೪೯ | ೨೪೪೩ | ೮೦೦ |
| ೧೮೭೬ | ೩೮೪೧ | ೧೫೦ | ೩೦೯೫ | ೭೪೬ | | | | | |

ನೊಂದಣೀ ಖಾತೆ.—ಯೇಳು ತಾಲೂಕುಗಳಲ್ಲಿ ಯೇಳು ಜನ ಸಬರಜಿಷ್ಟ್ರಾರರು ಕಲೆಕ್ಟರನಿಗೆ ಅಂಕಿತರಾಗಿ ಕೆಲಸ ಮಾಡುತ್ತಾರೆ. ಸನ್ ೧೮೮೨-೮೩ನೇ ವರ್ಷದಲ್ಲಿ ವೊಟ್ಟು ನೊಂದಣೀ ಫೀ ೧೦೪೬೦ ರೂಪಾಯಿ, ವೊಟ್ಟು ಖರ್ಚು ೭೮೭೦ ರೂಪಾಯಿ, ಸರಕಾರಕ್ಕೆ ಉಳಿತಾಯ ೨೫೯೦ ರೂಪಾಯಿ ಆಯಿತು. ಆ ವರ್ಷದಲ್ಲಿ ೪೭೯೬ ಸ್ಥಾವರ ಮಾಲಿನ ಬಾಬತು, ೧೩೨ ಜಂಗಮ ಮಾಲಿನ ಬಾಬತು, ೨೦ ಮೃತ್ಯುಪತ್ರಗಳು, ಅಂತೂ ೯೪೪೮ ದಸ್ತೈವಜುಗಳ ನೋಂದಣೀ ಆಯಿತು.

ಮಾಜಿಸ್ಟ್ರೇಟ ಖಾತೆ.—ಸನ್ ೧೮೮೨ರಲ್ಲಿ ಡಿಸ್ಟ್ರಿಕ್ಟ ಮಾಜಿಸ್ಟ್ರೇಟನಿಗೆ ಅಂಕಿತರಾಗಿ ೫ ಜನ ೧ನೇ ವರ್ಗದ ಮಾಜಿಸ್ಟ್ರೇಟರು, ೭ ಜನ ೨ನೇ ವರ್ಗದ ಮಾಜಿಸ್ಟ್ರೇಟರು, ೧೧ ಜನ ೩ನೇ ವರ್ಗದ ಮಾಜಿಸ್ಟ್ರೇಟರು ಕೆಲಸ ಮಾಡುತ್ತಿದ್ದರು. ಡಿಸ್ಟ್ರಿಕ್ಟ ಮಾಜಿಸ್ಟ್ರೇಟ ಸಹಿತ ಯಾವತ್ತು ಮಾಜಿಸ್ಟ್ರೇಟರು ಕೂಡಿ ಸನ್ ೧೮೮೧ರಲ್ಲಿ ೩೫೦೬ ಫೌಜದಾರೀ ವ್ಯಾಜ್ಯಗಳ ನಿರ್ಣಯ ಮಾಡಿದರು.

ಗುಹ್ನೇಗಾರರ ಜಾತಿಗಳು.—ಬೇಡರು, ಲಮಾಣಿಗಳು, ಕೈಕಾಡಿಗಳು, ವೊಡ್ಡರು, ಬೇಲ್ದಾರರು, ಗುಹ್ನೆ ಮಾಡಿ ಜೀವಿಸುವ ಜಾತಿಗಳುಂಟು. ಗುಹ್ನೆಗಳ ಪತ್ತೆಯಾಗಲಿಕ್ಕೆ ಧಾರವಾಡ ಜಿಲ್ಲೆಯ ಕೆಳಗೆ ಹೇಳಿದ ಆತಂಕಗಳೇ ಈ ಜಿಲ್ಲೆಯಲ್ಲಿಯೂ ಇರುತ್ತವೆ.

ಪೋಲೀಸ ಖಾತೆ.—ಸನ್ ೧೮೮೨ರಲ್ಲಿ ಸುಪರಿಂಟೆಂಡೆಂಟನಿಗೆ ಅಂಕಿತರಾಗಿ ೧೦೯ ಜನ ಅಮಲದಾರರು, ೫೫೩ ಜನ ಶಿಪಾಯಿಗಳು, ಅಂತೂ ೬೬೩ ಜನ ಪೋಲೀ

ಸರಿದ್ದರು. ಇವರಲ್ಲಿ ೩೭ ಜನ ಅಮಲದಾರರು, ೨೨೩ ಜನ ಶಿಪಾಯಿಗಳು ಮುಸಲ್ಮಾನರು; ೭ ಜನ ಅಮಲದಾರರು, ೬ ಜನ ಶಿಪಾಯಿಗಳು ಬ್ರಾಹ್ಮಣರು; ೭ ಜನ ಅಮಲದಾರರು, ೧೨ ಜನ ಶಿಪಾಯಿಗಳು ರಜಪೂತರು; ೪ ಜನ ಅಮಲದಾರರು, ೩೧ ಜನ ಶಿಪಾಯಿಗಳು ಲಿಂಗವಂತರು; ೩೭ ಜನ ಅಮಲದಾರರು, ೨೧೦ ಜನ ಶಿಪಾಯಿಗಳು ಆರೇರು; ವೊಬ್ಬ ಅಮಲದಾರ, ವೊಬ್ಬ ಶಿಪಾಯಿ ಜೈನರು; ೧೩ ಜನ ಅಮಲದಾರರು, ೩೦ ಜನ ಶಿಪಾಯಿಗಳು ಬೇರೆ ಬೇರೆ ಜಾತಿಗಳ ಹಿಂದೂ ಜನರು; ವೊಬ್ಬ ಪಾರ್ಸೀ ಅಮಲದಾರ; ಇಬ್ಬರು ಅಮಲದಾರರು, ವೊಬ್ಬ ಶಿಪಾಯಿ ಕ್ರಿಸ್ತಿಯನ್ನರು. ಬೆಳಗಾವೀ ಜಿಲ್ಲೆಯ ವೊಟ್ಟು ಕ್ಷೇತ್ರಫಲ ೪೬೫೬ ಚಚ್ಚೌಕು ಮೈಲು, ಜನಸಂಖ್ಯೆ ೮೬೪೦೧೪ ಇರುವ ಕಾರಣ ೭ ಚಚ್ಚೌಕು ಮೈಲುಗಳಲ್ಲಿ ವಾಸಿಸುವ ೧೩೦೩ ಜನರಿಗೆ ವೊಬ್ಬನಂತೆ ಪೋಲೀಸರಾಗುತ್ತಾರೆ. ಪ್ರತಿ ವೊಬ್ಬ ನಿವಾಸಿಗೆ ೧ ಆಣೆ ೨ ಪೈಗಳಂತೆ ಪೋಲೀಸರ ಖರ್ಚು ಬೀಳುತ್ತದೆ.

**ಗುಹ್ನೆಗಳು.**—ಸನ್ ೧೮೮೨ರ ಆಖೈರ ವರೆಗೆ ಮುಗಿಯುವ ವೊಂಬತ್ತು ವರ್ಷಗಳಲ್ಲಿ ೧೬೧ ಖೂನಗಳು, ೫೨ ಸದೋಷ ಮನುಷ್ಯ ವಧಗಳು, ೨೪೫ ಭಾರೀ ದುಖಾಪತುಗಳು, ೪೫೨ ದರೋಡೆ ಮುಂತಾದ ಕಳವುಗಳು, ೨೫೫೧೨ ಬೇರೆ ಪ್ರಕಾರದ ಗುಹ್ನೆಗಳು ಆದವು. ಪ್ರತಿ ವರ್ಷಕ್ಕೆ ಸರಾಸರೀ ಮಾನದಿಂದ ೨೯೩೬ ಗುಹ್ನೆಗಳಾಗುತ್ತವೆ. ಇದರಿಂದ ೨೯೪ ಜನ ನಿವಾಸಿಗಳಲ್ಲಿ ವೊಬ್ಬನು ಪ್ರತಿ ವರ್ಷ ವೊಂದು ಗುಹ್ನೆ ಮಾಡುತ್ತಾನೆಂದು ಫಲಿತವಾಗುತ್ತದೆ.

**ತುರಂಗಗಳು.**—ಬೆಳಗಾವಿಯ ಡಿಸ್ಟ್ರಿಕ್ಟ ಜೇಲಲ್ಲದೆ ಅಥಣಿಯಲ್ಲಿ ಇನ್ನೊಂದು ತುರಂಗವಿರುತ್ತದೆ. ಬೆಳಗಾವೀ ತುರಂಗದಲ್ಲಿ ಸನ್ ೧೮೮೨ರ ಕಡೆಯಲ್ಲಿ ೩೨ ಜನ ಗಂಡಸರು, ೧೦ ಜನ ಹೆಂಗಸರು, ಅಂತೂ ೪೨ ಜನ ಕೈದಿಗಳಿದ್ದರು. ಸನ್ ೧೮೮೩ರಲ್ಲಿ ೪೩೩ ಜನ ಗಂಡಸರು, ೬೬ ಜನ ಹೆಂಗಸರು, ಅಂತೂ ೪೯೯ ಜನ ಹೊಸ ಕೈದಿಗಳು ಬಂದರು; ಮತ್ತೂ ೩೯೬ ಜನ ಗಂಡಸರು, ೬೯ ಜನ ಹೆಂಗಸರು, ಅಂತೂ ೪೬೫ ಜನ ಕೈದಿಗಳು ಬಿಡುಗಡೆಯಾದರು. ಆ ವರ್ಷದಲ್ಲಿ ಪ್ರತಿ ದಿನಕ್ಕೆ ಸರಾಸರೀ ಮಾನದಿಂದ ೬೦ ಜನ ಕೈದಿಗಳಾಗಿದ್ದರು.

# ವಿಜಾಪುರ ಜಿಲ್ಲೆ.

**ದಿವಾಣೀ ಕೋರ್ಟುಗಳು.**—ಹಿಂದೆ ಹೇಳಿದಂತೆ ಸನ್ ೧೮೬೯ರಲ್ಲಿ ಈ ಜಿಲ್ಲೆಯ ದಿವಾಣೀ ಖಾತೆಯು ಬೆಳಗಾವಿಯಿಂದ ಬೇರೆ ಆದಾಗ ಕಲಾದಗಿಯ ಡಿಸ್ಟ್ರಿಕ್ಟ ಕೋರ್ಟು ತೆಗಿದು ಆ ಜಿಲ್ಲೆಗೂ ಈ ಜಿಲ್ಲೆಗೂ ಕೂಡಿ ವೊಬ್ಬ ಜಡಜನನ್ನು ನೇಮಿಸಿ ಕಲಾದಗಿಯಲ್ಲಿ ಅಸಿಸ್ಟಾಂಟ ಜಡಜ ಕೋರ್ಟು ಇಟ್ಟರು. ಸನ್ ೧೮೭೦ರಿಂದೀಚೆ ಈ ಜಿಲ್ಲೆಯಲ್ಲಿ ವೊಟ್ಟಿಗೆ ೪ ದಿವಾಣೀ ಕೋರ್ಟುಗಳಿವೆ; ಇವುಗಳಲ್ಲಿ ೧೮೭೦ರಲ್ಲಿ ೨೪೯೯,

೧೮೭೫ರಲ್ಲಿ ೩೫೪೫, ೧೮೮೦ರಲ್ಲಿ ೨೩೩೪ ವ್ಯಾಜ್ಯಗಳ ನಿರ್ಣಯವಾಯಿತು. ೪ ದಿವಾಣೀ ಕೋರ್ಟುಗಳಲ್ಲಿ ಸೀನೀಯರ ಅಸಿಸ್ಟಾಂಟ ಜಡಜನ ಕೋರ್ಟು ವಿಜಾಪುರದಲ್ಲಿ, ವಿಜಾಪುರ, ಬಾಗಲಕೋಟೆ, ಮುದ್ದೇಬಿಹಾಳಗಳಲ್ಲಿ ವೊಂದೊಂದು ಸಬಜಡಜರ ಕೋರ್ಟುಗಳು ಇರುತ್ತವೆ.

## ವಿಜಾಪುರ—ವ್ಯಾಜ್ಯಗಳ ವಿವರ. ೧೮೭೦ - ೧೮೮೨.

| ವರ್ಷ. | ವ್ಯಾಜ್ಯಗಳು. | ಸರಾಸರಿ ದಿವಸಗಳು. | ಸಾಕ್ಷಿದಾರರು. | ಜೂರರು. | ವರ್ಷ. | ವ್ಯಾಜ್ಯಗಳು. | ಸರಾಸರಿ ದಿವಸಗಳು. | ಸಾಕ್ಷಿದಾರರು. | ಜೂರರು. |
|---|---|---|---|---|---|---|---|---|---|
| ೧೮೭೦ | ೨೪೧೯ | ೧೩೭ | ೨೦೩೪ | ೩೯೫ | ೧೮೭೭ | ೧೬೭೩ | ೧೨೬ | ೧೩೬೧ | ೩೧೨ |
| ೧೮೭೧ | ೨೫೬೯ | ೧೨೩ | ೨೧೫೬ | ೪೧೩ | ೧೮೭೮ | ೨೭೦೮ | ೧೦೨ | ೨೩೪೨ | ೩೬೬ |
| ೧೮೭೨ | ೨೬೩೩ | ೧೨೦ | ೨೨೨೪ | ೪೦೯ | ೧೮೭೯ | ೨೮೬೪ | ೯೨ | ೨೫೫೫ | ೩೦೯ |
| ೧೮೭೩ | ೩೨೫೮ | ೧೧೧ | ೨೭೮೬ | ೪೦೨ | ೧೮೮೦ | ೨೩೩೪ | ೯೧ | ೨೦೬೨ | ೨೭೨ |
| ೧೮೭೪ | ೩೪೩೮ | ೧೦೧ | ೨೯೩೮ | ೫೦೦ | ೧೮೮೧ | ೧೯೮೪ | ೯೫ | ೧೬೪೩ | ೩೪೧ |
| ೧೮೭೫ | ೩೫೪೫ | ೯೬ | ೩೦೮೩ | ೪೬೨ | ೧೮೮೨ | ೨೬೨೯ | ೭೪ | ೨೨೧೮ | ೪೧೧ |
| ೧೮೭೬ | ೩೩೩೭ | ೧೦೧ | ೩೯೬ | ೪೪೧ | | | | | |

**ನೋಂದಣೀ ಖಾತೆ.**—ಯೆಂಟು ತಾಲೂಕುಗಳಲ್ಲಿ ಯೆಂಟು ಜನ ಸಬರಜಿಸ್ಟ್ರಾರರು ಕಲೆಕ್ಟರನಿಗೆ ಅಂಕಿತರಾಗಿ ಕೆಲಸ ಮಾಡುವರು. ಸನ್ ೧೮೮೨-೮೩ನೇ ವರ್ಷದಲ್ಲಿ ವೊಟ್ಟು ನೋಂದಣೀ ಫೀ ವಸೂಲು ೪೨೬೦ ರೂಪಾಯಿ, ಖರ್ಚು ೩೪೬೦ ರೂಪಾಯಿ ಸರಕಾರಕ್ಕೆ ಆದಾಯ ೮೦೦ ರೂಪಾಯಿ. ಆ ವರ್ಷ ನೋಂದಿಸಿದ ದಸ್ತೈವಜುಗಳಲ್ಲಿ ಸ್ಥಾವರ ಮಾಲಿನ ಬಾಬತು ೧೮೦೩, ಜಂಗಮ ಮಾಲಿನ ಬಾಬತು ೬೫, ಮೃತ್ಯು ಪತ್ರ ೧೪, ಅಂತೂ ೧೮೮೨.

**ಮಾಜಿಸ್ತ್ರೇಟ ಖಾತೆ.**—ಐದು ಮಂದಿ ೧ನೇ ವರ್ಗದ ಮಾಜಿಸ್ತ್ರೇಟರು, ೨ನೇ ೩ನೇ ವರ್ಗದವರು ಕೂಡಿ ೧೮ ಜನ, ಅಂತೂ ೨೩ ಜನ. ಸನ್ ೧೮೮೨ರಲ್ಲಿ ೧ನೇ ವರ್ಗದ ಮಾಜಿಸ್ತ್ರೇಟರು ೨೩೫, ೨ನೇ ೩ನೇ ವರ್ಗದವರು ೧೨೬೨ ಫೌಜದಾರೀ ವ್ಯಾಜ್ಯಗಳ ನಿರ್ಣಯ ಮಾಡಿದರು.

**ಗುನ್ಹೇಗಾರರ ಜಾತಿಗಳು.**—ಕೈಕಾಡಿಗಳು ಮುಖ್ಯ ಗುನ್ಹೇಗಾರರ ಜಾತಿಯು. ಇವರು ನಿಜಾಮನ ರಾಜ್ಯದಲ್ಲಿ ಇರುತ್ತಾರೆ. ಇವರು ಮೊದಲು ಪಾಳತಿಯಷವನ್ನು

ಬ್ರಾಹ್ಮಣರ ಇಲ್ಲವೆ ಲಿಂಗವಂತರ ಸೋಗು ಹಾಕಿ ಕಳಿಸಿ, ಇಂಥಾ ಊರಲ್ಲಿ ಇಂಥಾ ಮನೆ ವೊಡೆಯ ತಕ್ಕದ್ದೆಂದು ಗೊತ್ತು ಮಾಡುವರು. ಆ ಮೇಲೆ ವೊಂದು ರಾತ್ರಿಯಲ್ಲಿ ಬಹು ಬೇಗ ನಡಿಯುವಂಥ ಕುದುರೆಗಳನ್ನೇರಿ ಕೊಂಡು ೨೦, ೩೦ ಮೈಲು ದಾರೀ ನಡಿದು, ಗೊತ್ತು ಮಾಡಿದ ಊರಲ್ಲಿ ಗೊತ್ತು ಮಾಡಿದ ಮನೆಗೆ ಹೋಗಿ, ಮಾಳಿಗೆಯ ವೊಡಿದು, ಸಿಕ್ಕಿದ್ದನ್ನು ಕದ್ದು ಕೊಂಡು ಹೋಗುವರು. ಧಾರವಾಡ ಜಿಲ್ಲೆಯಲ್ಲಿ ಹೇಳಿದ ಕಾರಣಗಳ ಮೂಲಕವಾಗಿ ಗುಹ್ನೆಗಳ ಪತ್ತೆ ಆಗಲಿಕ್ಕೆ ಬಹಳ ತೊಂದರೆಯಾಗುತ್ತದೆ. ಉತ್ತಮ ಜಾತಿಯವರಿಗೆ ಜಾತಿ ಸಂಬಂಧದ ವ್ಯಾಜ್ಯಗಳ ಹೊರ್ತು ಬೇರೆ ಪ್ರಕಾರದ ಗುಹ್ನೆಗಳ ಚಟವಿರುವದಿಲ್ಲ.

ಪೋಲೀಸ ಖಾತೆ.—ಸನ್ ೧೮೮೨ರಲ್ಲಿ ೧೦೦ ಜನ ಅಮಲದಾರರು, ೫೧೩ ಜನ ಶಿಪಾಯಿಗಳು, ಅಂತೂ ೬೧೩ ಜನ ಪೋಲೀಸರು ಸುಪರಿಂಟೆಂಡೆಂಟನ ಕೈಕೆಳಗೆ ಕೆಲಸ ಮಾಡುತ್ತಿದ್ದರು. ಇವರಲ್ಲಿ ೪೫ ಜನ ಅಮಲದಾರರು, ೩೦೮ ಜನ ಶಿಪಾಯಿಗಳು ಮುಸಲ್ಮಾನರು; ೭ ಜನ ಅಮಲದಾರರು, ೧೫ ಜನ ಶಿಪಾಯಿಗಳು ಬ್ರಾಹ್ಮಣರು; ೧೦ ಜನ ಅಮಲದಾರರು, ೨೦ ಜನ ಶಿಪಾಯಿಗಳು ರಜಪೂತರು; ೩ ಜನ ಅಮಲದಾರರು, ೮ ಜನ ಶಿಪಾಯಿಗಳು ಲಿಂಗವಂತರು; ೩೦ ಜನ ಅಮಲದಾರರು, ೧೧೧ ಜನ ಶಿಪಾಯಿಗಳು ಆರೇರು; ೫ ಜನ ಅಮಲದಾರರು, ೪೭ ಜನ ಶಿಪಾಯಿಗಳು ಬೇರೆ ಜಾತಿಗಳ ಹಿಂದೂ ಜನರು; ಇಬ್ಬರು ಅಮಲದಾರರು ಕ್ರಿಸ್ತಿಯನ್ನರು. ಯಾವತ್ತು ಪೋಲೀಸರ ಸಂಬಳ, ಭತ್ತೆ, ಕೂಡಿ ವರ್ಷದ ಖರ್ಚು, ೯೧೦೯೬ ರೂಪಾಯಿ. ಇದರಲ್ಲಿ ಸುಪರಿಂಟೆಂಡೆಂಟನ ಸಂಬಳ ೫೪೭೨, ಭತ್ತೆ ೧೭೪೯, ಅಂತೂ ೭೨೨೧ ರೂಪಾಯಿ; ಆವನ ಕಚೇರಿಯವರ ಸಂಬಳ ಭತ್ತೆ ಕೂಡಿ ೪೯೯೪ ರೂಪಾಯಿ. ವಿಜಾಪುರ ಜಿಲ್ಲೆಯ ಕ್ಷೇತ್ರ ೫೭೫೭ ಚಚ್ಚೌಕು ಮೈಲು; ಜನಸಂಖ್ಯೆ ೬೩೮೪೯೩. ಇದರಿಂದ ೯ ಚಚ್ಚೌಕು ಮೈಲಿನ ಕ್ಷೇತ್ರದಲ್ಲಿ ವಾಸಿಸುವ ೧೦೩೭ ಜನರಿಗೆ ವೊಬ್ಬನಂತೆ ಪೋಲೀಸನಾಗುತ್ತಾನೆ. ಆದ್ದರಿಂದ ಪ್ರತಿ ವೊಬ್ಬ ನಿವಾಸಿಗೆ ಪೋಲೀಸರ ಖರ್ಚು ಸುಮಾರು ೨ ಆಣೆಯಾಗುತ್ತದೆ.

ಗುಹ್ನೆಗಳು.—ಸನ್ ೧೮೮೨ರ ಆಖೈರ ವರೆಗೆ ಮುಗಿಯುವ ವೊಂಬತ್ತು ವರ್ಷಗಳಲ್ಲಿ ೧೫೨ ಖೂನಗಳು, ೬೫ ಸದೋಷ ಮನುಷ್ಯವಧಗಳು, ೧೫೮ ಭಾರೀ ದುಖಾಪತುಗಳು, ೬೨೩ ದರೋಡೆ ಮುಂತಾದ ಕಳವುಗಳು, ೨೨೭೮೬ ಬೇರೆ ಪ್ರಕಾರದ ಗುಹ್ನೆಗಳು ಆದವು. ಆದ್ದರಿಂದ ಪ್ರತಿ ವರ್ಷ ಸರಾಸರಿಯಿಂದ ೨೬೪೩ ಗುಹ್ನೆಗಳಾದವು. ಅಂದರೆ ೨೦೪ ಜನ ನಿವಾಸಿಗಳಲ್ಲಿ ವೊಬ್ಬನು ಪ್ರತಿ ವರ್ಷ ವೊಂದು ಗುಹ್ನೆ ಮಾಡುತ್ತಾನೆಂದು ಫಲಿತವಾಗುತ್ತದೆ.

ತುರಂಗಗಳು.—ಕಲಾದರ್ಗಿಯಲ್ಲಿ ಡಿಸ್ಟ್ರಿಕ್ಟ ಜೇಲೆಂಬ ತುರಂಗವೂ ಬಾಗೇವಾಡಿಯಲ್ಲಿ ಇನ್ನೊಂದು ತುರಂಗವೂ ಉಂಟು. ಇವುಗಳಲ್ಲಿ ಸನ್ ೧೮೮೨ರ ಕಡೆಯಲ್ಲಿ ೪೬

ಜನ ಗಂಡಸರು, ೨೨ ಜನ ಹೆಂಗಸರು, ಅಂತೂ ೬೮ ಜನ ಕೈದಿಗಳಿದ್ದರು. ಸನ್ ೧೮೮೩ರಲ್ಲಿ ೨೭೦ ಜನ ಗಂಡಸರೂ, ೩೪ ಜನ ಹೆಂಗಸರೂ ಕೂಡಿ ೩೦೪ ಜನ ಹೊಸ ಕೈದಿಗಳು ತುರಂಗಕ್ಕೆ ಶೇರಿದರು; ಮತ್ತೂ ೨೪೭ ಜನ ಗಂಡಸರೂ, ೩೭ ಜನ ಹೆಂಗಸರೂ ಕೂಡಿ ಒಟ್ಟು ೨೮೪ ಜನ ಕೈದಿಗಳು ಬಿಡುಗಡೆಯಾದರು. ಸದರೀ ವರ್ಷದಲ್ಲಿ ಪ್ರತಿ ದಿವಸ ಸರಾಸರಿಯಿಂದ ೬೮ ಜನ ಕೈದಿಗಳಿದ್ದರು.

## ಕಾನಡಾ ಜಿಲ್ಲೆ.

ದಿವಾಣೀ ಕೋರ್ಟುಗಳು.—ಸನ್ ೧೮೬೨ರಲ್ಲಿ ಈ ಜಿಲ್ಲೆಯು ಮುಂಬಯಿ ಇಲಾಖೆಗೆ ಶೇರಿದಾಗ ಹೊನ್ನಾವರದಲ್ಲಿ ಡಿಸ್ಟ್ರಿಕ್ಟ ಜಡಜನ ಕೋರ್ಟು; ಅಲ್ಲಿಯೇ ಇನ್ನೊಂದು ಮುಫತೀ ಸದರಅಮೀನನ ಕೋರ್ಟು, ಕುಮಟೆಯಲ್ಲಿ ಮುನಸೀಫನ ಕೋರ್ಟು, ಶಿರಸಿಯಲ್ಲಿ ಸದರಅಮೀನನ ಕೋರ್ಟು ಇದ್ದವು. ಆದರೆ ಇನ್ನೂ ೫ ಬೇರೆ ಮುನಸೀಫ ಕೋರ್ಟುಗಳಿದ್ದವೆಂದು ತೋರುತ್ತದೆ. ಸನ್ ೧೮೭೦ರಲ್ಲಿ ಡಿಸ್ಟ್ರಿಕ್ಟ ಜಡಜ ಕೋರ್ಟಿನ ಕೆಳಗೆ ೪ ಸಬಜಡಜ ಕೋರ್ಟುಗಳಾಗಿ, ಸನ್ ೧೮೮೦ರ ವರೆಗೆ ಯಥಾ ಪ್ರಕಾರ ನಡಿಯುತ್ತಿದ್ದವು. ಇವುಗಳಲ್ಲೆಲ್ಲ ಕೂಡಿ ಸನ್ ೧೮೭೦ರಲ್ಲಿ ೨೪೬೬, ಸನ್ ೧೮೭೪ರಲ್ಲಿ ೨೮೬೬, ಸನ್ ೧೮೮೦ರಲ್ಲಿ ೨೩೦೩ ವ್ಯಾಜ್ಯಗಳ ನಿರ್ಣಯವಾಯಿತು. ಕಾರವಾಡದಲ್ಲಿ ಫರ್ಸ್ಟ ಕ್ಲಾಸ ಸಬಜಡಜ ಕೋರ್ಟು, ಡಿಸ್ಟ್ರಿಕ್ಟ ಜಡಜ ಕೋರ್ಟು, ಶಿರಸಿಯಲ್ಲಿ ಫರ್ಸ್ಟ ಕ್ಲಾಸ ಸಬಜಡಜ ಕೋರ್ಟು, ಕುಮಟಾ ಹೊನ್ನಾವರಗಳಲ್ಲಿ ಒಂದೊಂದು ಸೇಕಂಡ ಕ್ಲಾಸ ಸಬಜಡಜ ಕೋರ್ಟುಗಳು ಇರುತ್ತವೆ.

### ಕಾನಡಾ—ವ್ಯಾಜ್ಯಗಳ ವಿವರ. ೧೮೭೦-೧೮೮೧.

| ವರ್ಷ. | ವ್ಯಾಜ್ಯಗಳು. | ಸರಾಸರೀ ರಕಮು. | ಬಿನ್ನ ತಕ್ರಾರೀ. | ತಕ್ರಾರೀ. | ವರ್ಷ. | ವ್ಯಾಜ್ಯಗಳು. | ಸರಾಸರಿ ರಕಮು. | ಬಿನ್ನ ತಕ್ರಾರೀ. | ತಕ್ರಾರೀ. |
|---|---|---|---|---|---|---|---|---|---|
| ೧೮೭೦ | ೨೪೬೭ | ೧೨೯ | ೧೭೭೮ | ೬೮೬ | ೧೮೭೬ | ೨೯೧೦ | ೧೨೯ | ೧೯೩೪ | ೯೭೬ |
| ೧೮೭೧ | ೩೦೩೬ | ೧೩೯ | ೨೨೧೯ | ೮೧೭ | ೧೮೭೭ | ೨೫೮೬ | ೩೧೬ | ೧೭೨೪ | ೮೬೨ |
| ೧೮೭೨ | ೨೮೯೬ | ೧೫೯ | ೨೦೧೯ | ೮೭೭ | ೧೮೭೮ | ೨೨೭೨ | ೧೧೨ | ೧೫೮೨ | ೬೯೦ |
| ೧೮೭೩ | ೩೧೬೩ | ೧೨೯ | ೨೧೬೬ | ೧೦೨೭ | ೧೮೭೯ | ೩೫೮೬ | ೧೧೭ | ೨೮೧೪ | ೭೭೫ |
| ೧೮೭೪ | ೨೮೭೧ | ೧೪೧ | ೧೯೫೮ | ೯೧೩ | ೧೮೮೦ | ೨೩೦೬ | ೧೧೦ | ೧೬೧೦ | ೬೯೬ |
| ೧೮೭೫ | ೩೦೯೨ | ೨೦೫ | ೨೧೦೦ | ೯೯೨ | ೧೮೮೧ | ೨೦೯೫ | ೧೫೫ | ೧೩೭೬ | ೭೧೯ |

**ನೋಂದಣೀ ಖಾತೆ.**—ಯೆಂಟು ತಾಲೂಕುಗಳಲ್ಲಿ ಯೆಂಟು ಜನ ಸಬರಜಿಸ್ಟ್ರಾರರು ಕಲೆಕ್ಟರನಿಗೆ ಅಂಕಿತರಾಗಿ ಕೆಲಸ ಮಾಡುವದಲ್ಲದೆ, ಹೊಬ್ಬ ಮಾಮಲೇದಾರನ ಶಿರಸ್ತೆದಾರನೂ ಹೊಬ್ಬ ಮಹಾಲಕರಿಯ ಶಿರಸ್ತೆದಾರನೂ ರಜಿಸ್ಟ್ರಾರನ ಕೆಲಸ ಮಾಡುತ್ತಾನೆ. ಸನ್ ೧೮೮೧-೮೨ನೇ ವರ್ಷದಲ್ಲಿ ಹೊಟ್ಟು ನೋಂದಣೀ ಫೀ ವಸೂಲು ೧೦೭೮೦ ರೂಪಾಯಿ ಹೊಟ್ಟು ಖರ್ಚು ೨೪೭೦ ರೂಪಾಯಿ, ಸರಕಾರಕ್ಕೆ ಉಳಿತಾಯ ೮೩೧೦ ರೂಪಾಯಿ ಆಯಿತು. ಆ ವರ್ಷದಲ್ಲಿ ಸ್ಥಾವರ ಮಾಲಿನ ಬಾಬತು ೩೪೭೩, ಜಂಗಮ ಮಾಲಿನ ಬಾಬತು ೬೬೪, ಮೃತ್ಯು ಪತ್ರಗಳು ೧೮, ಅಂತೂ ೪೧೫೫ ದಸ್ತೈವಜುಗಳು ನೋಂದಣೀ ಆದವು.

**ಮಾಜಿಸ್ಟ್ರೇಟ ಖಾತೆ.**—ಡಿಸ್ಟ್ರಿಕ್ಟ ಮಾಜಿಸ್ಟ್ರೇಟನ ಕೈ ಕೆಳಗೆ ೫ ಜನ ೧ನೇ ವರ್ಗದ ಮಾಜಿಸ್ಟ್ರೇಟರು, ೨ನೇ ೩ನೇ ವರ್ಗದವರು ಕೂಡಿ ೨೦ ಜನ ಕೆಲಸ ಮಾಡುತ್ತಾರೆ. ಸನ್ ೧೮೮೨ರಲ್ಲಿ ೧ನೇ ವರ್ಗದ ಮಾಜಿಸ್ಟ್ರೇಟರು ೨೦೭, ೨ನೇ ೩ನೇ ವರ್ಗದವರು ೧೩೨೭ ಫೌಜದಾರೀ ನ್ಯಾಜ್ಯಗಳ ನಿರ್ಣಯ ಮಾಡಿದರು.

**ಗುಪ್ಪೆಗಾರರ ಜಾತಿಗಳು.**—ಕಳವಿನಿಂದ ಜೀವಿಸುವಂಥ ಜಾತಿಗಳು ಈಗ ಯಾವವೂ ಇಲ್ಲ. ಪೂರ್ವದಲ್ಲಿ ಪಳಿಪೈಕರು, ಕೊಮಾರ ಪೈಕರು, ಲಮಾಣಿಗಳು ಬಹಳವಾಗಿ ಕಳವಿನ ಹೋರೆ ಮಾಡುತ್ತಿದ್ದರು. ಆದರೆ ಇವರು ಈಗ ಹೊಕ್ಕಲತನ ಮುಂತಾದ ಬಾಳ್ವೆವಂತರ ಹೋರೆಗಳನ್ನು ಮಾಡಿ ಕೊಂಡಿರುತ್ತಾರೆ. ಲಮಾಣಿಗಳ ಹೊಟ್ಲೆತ್ತುಗಳು ಈ ಜಿಲ್ಲೆಗೆ ಆಗಾಗ್ಗೆ ಬರುತ್ತಿದ್ದಾಗ್ಯೂ ಕಳವಿನ ಉಪದ್ರವವು ಆಗುವದಿಲ್ಲ. ಆದರೆ ಗೋವೆಯ ಶೀಮೆಯಿಂದ ಕಳ್ಳರ ಟೋಳಿಗಳು ಬರುತ್ತಿರುತ್ತವೆ. ಗುಪ್ಪೆಗಳ ಪತ್ತೆಯಾಗಲಿಕ್ಕೆ ಧಾರವಾಡ ಜಿಲ್ಲೆಯ ಕೆಳಗೆ ಹೇಳಿದ ಆತಂಕಗಳಲ್ಲದೆ ಗುಡ್ಡಗಳಿಂದಲೂ ಹೊತ್ತುಗಳಿಂದಲೂ, ಅಡವಿಯಿಂದಲೂ ಬಹಳ ಆತಂಕವಾಗುತ್ತದೆ. ಉತ್ತಮ ಕುಲದವರು ಖೊಟ್ಟಿ ದಸ್ತೈವಜುಗಳನ್ನೂ ಖೊಟ್ಟಿ ಸಾಕ್ಷಿಗಳನ್ನೂ ಬಹಳ ಮಾಡುತ್ತಾರೆ.

**ಪೋಲೀಸ ಖಾತೆ.**—ಸನ್ ೧೮೮೧ರಲ್ಲಿ ಸುಪರಿಂಟೆಂಡೆಂಟನ ಕೈ ಕೆಳಗೆ ೧೦೬ ಜನ ಅಮಲದಾರೂ, ೫೫೫ ಜನ ಶಿಪಾಯಿಗಳು, ಅಂತೂ ೬೬೬ ಜನ ಪೋಲೀಸರಿದ್ದರು. ಇವರಲ್ಲಿ ೩೬ ಜನ ಅಮಲದಾರರೂ, ೨೦೮ ಜನ ಶಿಪಾಯಿಗಳೂ ಮುಸಲ್ಮಾನರು; ೧೨ ಜನ ಅಮಲದಾರರೂ, ೧೬ ಜನ ಶಿಪಾಯಿಗಳೂ ಬ್ರಾಹ್ಮಣರು; ಇಬ್ಬರು ಅಮಲದಾರರು ರಜಪೂತರು; ೫೪ ಜನ ಅಮಲದಾರರೂ, ೨೬೧ ಜನ ಶಿಪಾಯಿಗಳೂ ಆರೇರು; ಇಬ್ಬರು ಅಮಲದಾರರೂ, ೪೫ ಜನ ಶಿಪಾಯಿಗಳೂ ಕ್ರಿಸ್ತಿಯನ್ನರು ಇದ್ದರು. ಯಾವತ್ತು ಪೋಲೀಸರ ಸಂಬಳ, ಭತ್ತೆ, ಕೂಡಿ ೧೧೨೦೪೨ ರೂಪಾಯಿ ವರ್ಷದ ಖರ್ಚು ಆಗುತ್ತದೆ. ಇವರಲ್ಲಿ ಸುಪರಿಂಟೆಂಡೆಂಟನ ಸಂಬಳ ೧೨೦೦೦ ಭತ್ತೆ ೨೪೦೦ ರೂಪಾಯಿ:

ತವನ ಕಚೇರಿಯವರ ಸಂಬಳ, ಭತ್ತೆ, ಕೂಡಿ ೩೨೬೫ ರೂಪಾಯಿ. ಕಾನಡಾ ಜಿಲ್ಲೆಯ ವೊಟ್ಟು ಕ್ಷೇತ್ರಫಲ ೩೯೧೦ ಚಚ್ಚೌಕು ಮೈಲು, ಜನಸಂಖ್ಯೆ ೪೨೧೮೪೦. ಇದರಿಂದ ಸುಮಾರು ೬ ಚಚ್ಚೌಕು ಮೈಲುಗಳಲ್ಲಿ ವಾಸಿಸುವ ೬೩೬ ಜನ ನಿವಾಸಿಗಳಿಗೆ ವೊಬ್ಬನಂತೆ ಪೋಲೀಸರಾಗುತ್ತಾರೆ. ಪ್ರತಿ ವೊಬ್ಬ ನಿವಾಸಿಗೆ ೪ ಆಣೆ ೩ ಪೈಯಂತೆ ಪೋಲೀಸರ ಖರ್ಚು ಆಗುತ್ತದೆ.

ಗುಹ್ನೆಗಳು.— ಸನ್ ೧೮೮೧ರ ಆಖೈರ ವರೆಗೆ ಮುಗಿಯುವ ೮ ವರ್ಷಗಳಲ್ಲಿ ೩೦ ಖೂನಗಳು, ೩೬ ಸದೋಷ ಮನುಷ್ಯವಧಗಳು, ೪೯ ಭಾರೀ ದುಖಾಪತಗಳು, ೧೨೪ ದರೋಡೆ ಮುಂತಾದ ಕಳವುಗಳು, ೧೬೫೭೭ ಬೇರೆ ತರದ ಗುಹ್ನೆಗಳು ಆದವು. ಇದರಿಂದ ಪ್ರತಿ ವರ್ಷ ೨೧೦೦ ಗುಹ್ನೆಗಳಾದವು; ಅಂದರೆ ಪ್ರತಿ ೨೦೦ ಜನ ನಿವಾಸಿಗಳಲ್ಲಿ ವೊಬ್ಬನು ಪ್ರತಿ ವರ್ಷ ವೊಂದು ಗುಹ್ನೆ ಮಾಡುತ್ತಾನೆಂದು ಫಲಿತವಾಗುತ್ತದೆ.

ತುರಂಗಗಳು.— ಕಾರವಾಡದಲ್ಲಿ ವೊಂದು ಡಿಸ್ಟ್ರಿಕ್ಟ ಜೇಲು ಮಾತ್ರ ಇರುತ್ತದೆ. ಅದರಲ್ಲಿ ಸನ್ ೧೮೮೧ರ ಕಡೆಯಲ್ಲಿ ೮೯ ಜನ ಗಂಡಸರು, ೭ ಜನ ಹೆಂಗಸರು, ಅಂತೂ ೯೬ ಜನ ಕೈದಿಗಳಿದ್ದರು. ಸನ್ ೧೮೮೨ರಲ್ಲಿ ೧೪೬ ಜನ ಗಂಡಸರು, ೯ ಜನ ಹೆಂಗಸರು, ಅಂತೂ ೧೫೫ ಜನ ಹೊಸ ಕೈದಿಗಳು ಬಂದರು; ಮತ್ತೂ ೧೬೭ ಜನ ಗಂಡಸರು, ೧೨ ಜನ ಹೆಂಗಸರು, ಅಂತೂ ೧೭೯ ಜನ ಬಿಡುಗಡೆಯಾದರು. ಈ ವರ್ಷದಲ್ಲಿ ಪ್ರತಿ ದಿವಸ ಸರಾಸರೀ ಮಾನದಿಂದ ೯೫ ಜನ ಕೈದಿಗಳಿದ್ದರು.